
ಪುಸ್ತಕ ಪರಿಚಯ

# ಸೌಂದರ್ಯಾಮೃತಮ್




*ಕೃತಿ*
**ಸೌಂದರ್ಯಾಮೃತಮ್**
*ಲೇಖಕರು*
**ಡಾ. ವಿ. ಶ್ರೀಮತಿ**
*ಪ್ರಕಾಶಕರು*
**ವಿ.ವಿ. ಪ್ರಕಾಶನ**
**1393/2, ಸಿ.ಎಚ್.-31**
**(ಔಟ್‌ಹೌಸ್) 6ನೇ ಕ್ರಾಸ್,**
**ಕೃಷ್ಣಮೂರ್ತಿಪುರಂ,**
**ಮೈಸೂರು-570 004**
ಫೋನ್: 9448759815
*ಪುಟಗಳು* : 172
*ಬೆಲೆ* : 130/-

‘ಅನಾದಿ ಕಾಲದಿಂದ ಸಹಜವಾಗಿ ಸರಿಯುತ್ತ ಹರಿಯುತ್ತ ಸಾಗುತ್ತಿರುವ ಈ ಸಂಸಾರದ ಲಕ್ಷ್ಯವಾದರೂ ಏನಿರಬಹುದು?’ ಎಂದು ಅನೇಕ ಜ್ಞಾನ-ವಿಜ್ಞಾನ ಸಂಪನ್ನರು ಚಿಂತಿಸಿರುವರು; ಮತ್ತು ಮಹಾಗುರುವಿನ ಆಶ್ರಯವನ್ನು ಹೊಂದಿ ಸಂಸಾರದ ಪಾರವನ್ನು ತಿಳಿದು ಗುರಿ ಸೇರಿರುವರು.

**ಯಥಾ ನದ್ಯಃ ಸ್ಯಂದಮಾನಾಃ**
**ಸಮುದ್ರೇಽಸ್ತಂ ಗಚ್ಛಂತಿ ನಾಮರೂಪೇ ವಿಹಾಯ।**
**ತಥಾ ವಿದ್ವಾನ್ ನಾಮರೂಪಾಧ್ಯಾಮುಕ್ತಃ**
**ಪರಾತ್ಪರಂ ಪುರುಷಮುಪೈತಿ ದಿವ್ಯಮ್ ॥** *(ಮುಂಡಕ, ೩.೨.೮)*

ಹರಿಯುವುದನ್ನೇ ಸ್ವಭಾವವಾಗಿ ಹೊಂದಿರುವ ನದಿಗಳು ತಮ್ಮ ಗುರಿಯಾದ ಸಾಗರದೆಡೆಗೆ ಸರಿಯುತ್ತಲೇ ಹೋಗುತ್ತವೆ. ಹಾಗೆ ಸಾಗುವಾಗ ಅವು ಮಧ್ಯದಲ್ಲಿ ಉಂಟಾಗುವ ಯಾವ ಅಡಚಣೆಯನ್ನೂ ಗಣನೆಗೆ ತಂದುಕೊಳ್ಳುವುದಿಲ್ಲ. ಹಾಗೆಯೇ ಒಂದು ಶರೀರದಿಂದ ಮತ್ತೊಂದು ಶರೀರಕ್ಕೆ ಸಂಚರಿಸುತ್ತಿರುವ ಜೀವಿಗೆ ತನ್ನ ಮೂಲಭೂತವಾದ ಸಚ್ಚಿದಾನಂದ ಸ್ವರೂಪವನ್ನು ಹೊಂದುವುದೇ ಪರಮ ಲಕ್ಷ್ಯ - ಎಂದು ಅನುಭವಿಗಳು ಘೋಷಿಸಿದ್ದಾರೆ. ಹಾಗೆ ಜೀವಿ ತನ್ನ ಮೂಲದೆಡೆಗೆ ಸಾಗುವಾಗ ಲೌಕಿಕ ಸುಖ ಭೋಗಾಭಿಲಾಷೆ ಮೊದಲಾದವು ಅದರ ಗತಿಗೆ ಪ್ರತಿಬಂಧಕಗಳನ್ನೊಡ್ಡುತ್ತವೆ ಎಂಬುದನ್ನು ಅವರು ಗಮನಿಸಿದ್ದಾರೆ. ಇಂತಹ ಪ್ರತಿಬಂಧಕಗಳ ಸೆರೆಯಲ್ಲಿ ಸಿಲುಕಿ ನಲುಗಿ ಹೋಗುತ್ತಿರುವ ಜೀವಿಗಳ ಉದ್ಧಾರಕ್ಕಾಗಿ, ಗುರುಕರುಣೆಯಿಂದ ಸಂಸಾರದ ಮರ್ಮವರಿತು ಅದರ ಪಾರ ಸೇರಿದ ಆ ಜ್ಞಾನ ಚಕ್ಷುಗಳುಳ್ಳ ಮಹರ್ಷಿಗಳು ಅನುಭವಿಗಳು-ಸ್ವಾಧ್ಯಾಯ, ವ್ರತ, ಹೋಮ ಮೊದಲಾದವನ್ನು ಸಾಧನವಾಗಿ ಕರುಣಿಸಿದ್ದಾರೆ. ಅಂತಹ ಸಾಧನಗಳಲ್ಲಿ ಸ್ತೋತ್ರಗಳು ವಿಶಿಷ್ಟ ಸ್ಥಾನವನ್ನು ಗಳಿಸುತ್ತವೆ. ಹಾಗಾಗಿ ಸಾಹಿತ್ಯ ಕ್ಷೇತ್ರದಲ್ಲಿ ‘ಸ್ತೋತ್ರ ಸಾಹಿತ್ಯ’ ಪ್ರಕಾರವು ವಿಪುಲವಾಗಿ ಬೆಳೆದಿದೆ.

ಈ ಸಾಲಿನಲ್ಲಿ ಶ್ರೀಶಂಕರಾಚಾರ್ಯವಿರಚಿತ ಎಂದು ಹೇಳಲಾಗುವ ‘ಸೌಂದರ್ಯಲಹರೀ’ ಸ್ತೋತ್ರವು ಆತ್ಮಾನಂದದಲ್ಲಿ ಮುಳುಗಲಪೇಕ್ಷಿಸುವವರಿಗೆ ತಂತ್ರಶಾಸ್ತ್ರ ಸಾರಸರ್ವಸ್ವರೂಪದ್ದಾಗಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿದೆ. ‘ಸುಷ್ಠು ಉನತ್ತಿ - ಆರ್ದ್ರೀಕರೋತಿ ಚಿತ್ತಂ’ - ಚಿತ್ತವನ್ನು ಮೃದುಮಧುರವಾದ ಭಾವದಿಂದ ದ್ರವೀಕರಿಸಿ ಪರತತ್ತ್ವದ (ಮೂಲವಸ್ತುವಿನ) ಆಕಾರವನ್ನೇ ತಳೆಯುವಂತೆ ಮಾಡುವುದು ‘ಸುಂದರ’ ಎಂಬ ಪದದ ಅರ್ಥ. ಅದರ ಭಾವ ಸೌಂದರ್ಯ. ಈ ಭಾವ ಉನ್ಮಾದ, ಜೀವಿಯನ್ನು ದೇವಿಯಲ್ಲಿ ಲೀನವಾಗಿಸಿ, ಉಪರಮಿಸುವುದು. ಆದುದರಿಂದಲೇ ಇದು ಸೌಮ್ಯ(ಪ್ರಸನ್ನ)ವೂ, ರಮಣೀಯವೂ (ಆನಂದದಾಯಕವೂ) ಮಂಗಳ (ಭದ್ರ) ಆತ್ಮಕವೂ ಆಗಿದೆ. (‘ಸುಂದರ’ ಪದಕ್ಕೆ ಈ ಎಲ್ಲಾ ಅರ್ಥಗಳಿವೆ.)

**ಶಿವಶಕ್ತಿ ಸ್ವರೂಪೇಯಂ ಮಹಾತ್ರಿಪುರಸುಂದರೀ।**
**ಸಾಕ್ಷಾತ್ ಕಾಮದುಘಾ ನೃಣಾಂ ಜ್ಞಾನದಾ ಮುಕ್ತಿದಾಯಿನೀ॥**

ಎಂಬ ತ್ರಿಪುರಾಸಿದ್ಧಾಂತದ ಮಾತು ಈ ವಿಚಾರವನ್ನು ಪುಷ್ಟಿಗೊಳಿಸುತ್ತದೆ. ನಿರಾಕಾರಳಾದ ದೇವಿ (ಶಕ್ತಿ)ಯು ತನ್ನ ಜೀವಿಗಳನ್ನು ಅನುಗ್ರಹಿಸುವುದಕ್ಕಾಗಿ ಆಕಾರ ತಳೆದಿದ್ದಾಳೆ. ಆದರೆ ಇದು ‘ಪರಾಕ್ರಮಿ’ ಯಲ್ಲಿರುವ ಪರಾಕ್ರಮದಂತೆ ಮಾತಿಗೆ ನಿಲುಕದ್ದು. ಅವ್ಯಕ್ತವಾದುದು, ಹೊರ ಆಕಾರವು ಒಳತತ್ತ್ವ(ಆಕಾರ)ದ ಕಡೆಗೆ ಒಯ್ಯುವ ಸಾಧನ ಮಾತ್ರವಷ್ಟೇ. ಅಂತೆಯೇ ಈ ಸ್ತೋತ್ರದ ಮಾತುಗಳೂ ತಾಯಿಯಲ್ಲಿ ಜೀವಿಯನ್ನು ಒಯ್ದು ನಿಲ್ಲಿಸುವ ಸಾಧನಗಳು.

ಡಾ. ಶ್ರೀಮತಿಯವರು ತಮ್ಮ **‘ಸೌಂದರ್ಯಾಮೃತಮ್’** ಕೃತಿಯಲ್ಲಿ ಈ ಸ್ತೋತ್ರಕ್ಕೆ ಸರಳವಾದ ತಿಳಿಯಾದ ಅರ್ಥವಿವರಣೆ ನೀಡುವ ಪ್ರಯತ್ನ ಮಾಡಿದ್ದಾರೆ. ಅಗತ್ಯವಿರುವೆಡೆ, ಸೂಕ್ತ ಆಧಾರಗಳೊಡನೆ, ಸ್ವಲ್ಪ ವಿಸ್ತಾರವಾದ ವಿವರಣೆಯನ್ನೂ ನೀಡಿದ್ದಾರೆ. ಉದಾಹರಣೆಗೆ ೧೧ನೇ ಶ್ಲೋಕದಲ್ಲಿ ಶ್ರೀ ಚಕ್ರದ ನವಾವರಣಗಳೂ, ಅದರ ಬಗೆಗಳೂ, ಆ ಚಕ್ರದಲ್ಲಿ ನಿರ್ದಿಷ್ಟಸ್ಥಾನಗಳಲ್ಲಿ ವಾಸಿಸುವ ವಶಿನ್ಯಾದಿ ದೇವತೆಗಳು, ಮೊದಲಾದ ವಿವರಣೆ ನೀಡಿದ್ದಾರೆ. ೩೨ನೆಯ ಶ್ಲೋಕ ಅರ್ಥವನ್ನು ವಿವರಿಸುತ್ತಾ ತಾಯಿ ಸ್ವರೂಪದ ಮರ್ಮವನ್ನು ಬೋಧಿಸುವ ಷೋಡಶಾಕ್ಷರ(೧೬ ಅಕ್ಷರ)ಗಳ ತತ್ತ್ವವನ್ನು ತಿಳಿಸಲು ಪ್ರಯತ್ನಿಸಿದ್ದಾರೆ. ಶ್ಲೋಕ ೭೫ ರಲ್ಲಿ ಶ್ರೀಶಂಕರರ ಜೀವನಕ್ಕೆ ಸಂಬಂಧಿಸಿದ ಐತಿಹ್ಯವನ್ನೂ, ಶ್ಲೋಕ ೯೩ರಲ್ಲಿ ತಾಯಿಯ ಮೃದುವಾದ, ಕರುಣೆಯ ಕುರಿತಾದ ಭಾವಪೂರ್ಣವಾದ ವಿವರಣೆ ನೀಡಿದ್ದಾರೆ. ಶ್ಲೋಕ ೯೮ರಲ್ಲಿ ‘ಮಾಯಾ’ ಶಬ್ದದ ವ್ಯುತ್ಪತ್ತಿಯನ್ನೂ ಆ ಪದದ ವಿವಿಧ ಅರ್ಥಗಳ ವಿಶ್ಲೇಷಣೆಯನ್ನೂ ನಿರುಕ್ತ, ವರಾಹ ಪುರಾಣ ಮೊದಲಾದ ಶಾಸ್ತ್ರಗ್ರಂಥಗಳ ಆಧಾರದಲ್ಲಿ ಮಾಡಿದ್ದಾರೆ.

ಪ್ರತಿ ಶ್ಲೋಕಗಳ ಅಡಿಯಲ್ಲಿ ಯಂತ್ರಗಳ ರೇಖಾಚಿತ್ರಗಳನ್ನೂ ಅವುಗಳನ್ನೂ ಆರಾಧಿಸಬೇಕಾದ ಕ್ರಮಗಳನ್ನೂ ಕೊಡಲಾಗಿದೆ. ಆದರೆ ಈ ಯಂತ್ರಗಳ ಸ್ವರೂಪ ಪ್ರಾಚ್ಯವಿದ್ಯಾ ಸಂಶೋಧನಾಲಯ ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ ‘ಸೌಂದರ್ಯಲಹರೀ’ ಗ್ರಂಥದಲ್ಲಿರುವ ಯಂತ್ರಗಳ ಸ್ವರೂಪಕ್ಕಿಂತ ಬಹಳ ಭಿನ್ನವಾಗಿದೆ.

ಲೇಖಕಿಯ ಅಪೇಕ್ಷೆಯಂತೆ ಜನರು ಈ ಕೃತಿಯನ್ನು ಓದಿ, ಅರ್ಥಸಹಿತ ಪಾರಾಯಣ ಅನುಸಂಧಾನಗಳನ್ನು ಮಾಡಿ ದೇವಿಯ ಕೃಪಾನುಗ್ರಹಗಳಿಗೆ ಪಾತ್ರರಾಗಲಿ ಧನ್ಯರಾಗಲಿ. ಲೇಖಕಿಯ ಈ ಯತ್ನ ಸ್ತುತ್ಯವೂ ಅಭಿನಂದನೀಯವೂ ಆಗಿದೆ.

*- ಡಾ. ಕೆ.ಎಲ್.ಪ್ರಸನ್ನಾಕ್ಷೀ*